**ಸಿಸಿ ಃ 735/2021**

**ಚಾಸಾ –2**

**ಪ್ರಾಸಾ –2**

**ಸೋಮವಾರಪೇಟೆ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾ ದಂ ರವರ ನ್ಯಾಯಾಲಯದಲ್ಲಿ**
**ಸಿಸಿ ಃ 735/2021**

ಸಾಕ್ಷಿದಾರರ ಹೆಸರುಃ ಜಯಮ್ಮ
ತಂದೆ/ಗಂಡ ಹೆಸರುಃ ರಾಜು
ವಯಸ್ಸುಃ 53
ವೃತ್ತಿಃ ಕೂಲಿ
ವಾಸಸ್ಥಳಃ ಕುಶಾಲನಗರ.
ಸಾಕ್ಷಿಯು ಕ್ರಮವಾಗಿ ಪ್ರಮಾಣಿಕರಿಸಿದ ದಿನಾಂಕಃ 01-04-2024

ಮುಖ್ಯ ವಿಚಾರಣೆಃ ಎಪಿಪಿಯವರಿಂದ

ನನಗೆ ಚಾಸಾ 1 ನನ್ನ ಮಗಳು, ಚಾಸಾ 3 ನನ್ನ ಗಂಡ. ಮತ್ತು ಆರೋಪಿ ಪರಿಚಯ ನನಗೆ ಇದೆ. ನಾನು ಪೊಲೀಸರಿಗೆ ಅಪಘಾತ ಸಂಬಂಧ ಹೇಳಿಕೆ ಕೊಟ್ಟಿರುತ್ತೇನೆ. ದಿಃ 25-05-2021 ರಂದು 6.45 ಗಂಟೆಗೆ ನಾನು, ನನ್ನ ಗಂಡ, ನನ್ನ ಮಗಳು, ನನ್ನ ಇಬ್ಬರು ಮೊಮ್ಮಕ್ಕಳು ಸೇರಿ ನಾಗವಾರಕ್ಕೆ ಕುಶಾಲನಗರದಿಂದ ಹೋಗುತ್ತಿದ್ದೇವು. ನಾವು ಹೋಗುತ್ತಿದ್ದ ಪ್ಯಾಸೆಂಜರ್ ಆಟೋಗೆ ಗಣಗೂರಿನ ಬಳಿ ಎದುರುಗಡೆಯಿಂದ ಆರೋಪಿಯ ಗೂಡ್ಸ್ ಆಟೋ ವೇಗವಾಗಿ ಬಂದು ನಮ್ಮ ಆಟೋಗೆ ಗುದ್ದಿರುತ್ತದೆ. ಆಗ ನನ್ನ ಮೊಮ್ಮಗನಾದ ಭುವನ್ ರವರಿಗೆ ಬಲದ ಕೈ ಮತ್ತು ಎದೆಗೆ ಗಾಯ ಆಗಿರುತ್ತದೆ. ನನಗೂ ಸಹ ಎದೆಗೆ ಮತ್ತು ಕೈಗೆ ಗಾಯ ಆಗಿರುತ್ತದೆ. ಅದೇ ಆಟೋದಲ್ಲಿ ನನ್ನ ಮೊಮ್ಮಗನನ್ನು ಮತ್ತು ನನ್ನನ್ನು ಕರೆದುಕೊಂಡು ಸೋಮವಾರಪೇಟೆ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ಅಲ್ಲಿ ನನ್ನನ್ನು ಚಿಕಿತ್ಸೆ ಕೊಟ್ಟಿರುತ್ತಾರೆ. ನನ್ನ ಮೊಮ್ಮಗನಾದ ಭುವನ್ ನನ್ನು ಪರೀಕ್ಷೆ ಮಾಡಿದ ವೈದ್ಯರು ಆತ ಸ್ಥಳದಲ್ಲೇ ಮೃತ ಪಟ್ಟಿದ್ದಾರೆ ಎಂದು ತಿಳಿಸಿರುತ್ತಾರೆ. ನಂತರ ಚಾಸಾ 1 ರವರು ಸೋಮವಾರಪೇಟೆ

ಸಿಸಿ ಃ 735/2021
ಚಾಸಾ –2
ಪ್ರಾಸಾ –2

ಠಾಣೆಗೆ ಹೋಗಿ ದೂರನ್ನು ನೀಡಿರುತ್ತಾರೆ. ಆರೋಪಿಯ ತಪ್ಪಿನಿಂದ ಸದರಿ ಅಪಘಾತ ಆಗಿರುತ್ತದೆ. ಸಾಕ್ಷಿ ಛಾಯಾ ಚಿತ್ರಗಳನ್ನು ನೋಡಿ ಗುರುತಿಸಿರುತ್ತಾರೆ. ಈ ಮೇಲಿನಂತೆ ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ.

ಮುಖ್ಯ ವಿಚಾರಣೆ ಮುಕ್ತಾಯವಾಯಿತು.

ಪಾಟಿ ಸವಾಲುಃ ಶ್ರೀ. ಟಿ.ಜೆ.ಪಿ ವಕೀಲರಿಂದ

ಪಾಟಿ ಸವಾಲಿಗೆ ಸಮಯ ಕೋರಿದ್ದು ರೂ.500/- ಖರ್ಚು ವಿಧಿಸಿ ಸಮಯ ನೀಡಲಾಯಿತು.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ).

ಸಹಿ/-
ಓ ಹೇ ಕೇ ಸರಿ ಇದೆ

ಪ್ರ ದ ನ್ಯಾ ದಂ ಸೋ ಪೇಟೆ